# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

**ಕೇಂದ್ರ ಕಛೇರಿ: ಶಾಂತಿನಗರ : ಬೆಂಗಳೂರು 560027**

ಸಂಖ್ಯೆ:ಬೆಮಸಾ:ಕೇಕ:ಭ&ಜಾ:ತಶಾ: 254 :2025–26 ದಿನಾಂಕ: 26.08.2025.

**ಮಾರ್ಪಾಡು ಆದೇಶ ಸಂಖ್ಯೆ : 31 /2025**

(ಭದ್ರತಾ ಮತ್ತು ಜಾಗೃತಾ ಶಾಖೆಯಿಂದ ಜಾರಿ ಮಾಡಲಾಗಿದೆ)

**ವಿಷಯ** : ಮೊಬೈಲ್ ಪ್ರಕರಣಗಳ ವರ್ಗೀಕರಣವನ್ನು ಪರಿಷ್ಕರಿಸುವುದರ ಬಗ್ಗೆ.

**ಉಲ್ಲೇಖ** : ಸಾ.ಸ್ಥಾ.ಆ. ಸಂಖ್ಯೆ.30 ಬೆಮಸಾ:ಕೇಕ:ಭ&ಜಾ:ಎಲ್‌ಸಿ:407:2023–24 ದಿ:01.01.2024.

*******

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ತನಿಖಾ ಸಿಬ್ಬಂದಿಗಳು ದಾಖಲಿಸುವ ಸಾಮಾನ್ಯ, ಕೆಂಪು ಗುರುತಿನ ಪ್ರಕರಣ ಮತ್ತು ಗಂಭೀರ ಕೆಂಪು ಗುರುತಿನ ಪ್ರಕರಣಗಳನ್ನು ಮಾರ್ಪಡಿಸಿ ವರ್ಗೀಕರಿಸಿ ಉಲ್ಲೇಖದನ್ವಯ ಹೊರಡಿಸಲಾಗಿತ್ತು. ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗಳು ಮಾರ್ಗದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವಾಗ ಮೊಬೈಲ್ ಮತ್ತು ಡಿಜಿಟಲ್ ಗ್ಯಾಜೆಟ್ಸ್ (Bluetooth, Earphone, ಇತ್ಯಾದಿಗಳನ್ನು ಬಳಸುವುದನ್ನು ಹಾಗೂ ಮೊಬೈಲ್ ದೂರವಾಣಿ ಮೂಲಕ ಸಂಭಾಷಿಸುತ್ತಿದ್ದಲ್ಲಿ/ಸಂಗೀತ/ಆಡಿಯೋ ಆಲಿಸುತ್ತಿದ್ದಲ್ಲಿ/ಚಾಟಿಂಗ್ (Chatting) ಮಾಡುತ್ತಿರುವುದನ್ನು ನಿಷೇದಿಸಿ ಅವುಗಳನ್ನು ಬಳಸಿದ್ದಲ್ಲಿ, ಕೆಂಪು ಗುರುತಿನ ಪ್ರಕರಣದ (RMC) ಅಡಿಯಲ್ಲಿ ಪ್ರಕರಣ ದಾಖಲಿಸಿ, ಕ್ರಮ ವಹಿಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಸಂಸ್ಥೆಯ ವಾಹನಗಳಿಂದ ಅಪಘಾತಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಭವಿಸಿ, ಪ್ರಾಣ ಹಾನಿ ಉಂಟಾಗುತ್ತಿದ್ದು, ಸಾರ್ವಜನಿಕ ವಲಯದಲ್ಲಿ ಅಪಘಾತಗಳು ಸಂಸ್ಥೆಯ ಗೌರವಕ್ಕೆ ದಕ್ಕೆ ಉಂಟು ಮಾಡುತ್ತಿವೆ. ಈ ಅಪಘಾತಗಳ ಕಾರಣಗಳನ್ನು ಆಳವಾಗಿ ವಿಶ್ಲೇಷಿಸಿದಾಗ, ಕರ್ತವ್ಯ ವೇಳೆಯಲ್ಲಿ ಚಾಲಕರು ಮೊಬೈಲ್ ಬಳಕೆ ಮಾಡುತ್ತಿರುವುದು ಸಹ ಒಂದು ಕಾರಣವಾಗಿರುವ ಸಾಧ್ಯತೆ ಕಂಡು ಬರುತ್ತದೆ.

ಈ ಹಿನ್ನೆಲೆಯಲ್ಲಿ, ಚಾಲನಾ ಸಿಬ್ಬಂದಿಗಳು ಕರ್ತವ್ಯದ ಮೇಲೆ ಮೊಬೈಲ್ ಮತ್ತು ಡಿಜಿಟಲ್ ಗ್ಯಾಜೆಟ್ಸ್ (Bluetooth, Earphone), ಇತ್ಯಾದಿಗಳನ್ನು ಬಳಸುವುದನ್ನು ಹಾಗೂ ಮೊಬೈಲ್ ದೂರವಾಣಿ ಮೂಲಕ ಸಂಭಾಷಿಸುತ್ತಿದ್ದಲ್ಲಿ/ಸಂಗೀತ/ಆಲಿಸುತ್ತಿದ್ದಲ್ಲಿ/ಚಾಟಿಂಗ್(Chatting)ಮಾಡುತ್ತಿರುವ ಪ್ರಕರಣಗಳು ದಾಖಲಾದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಿ, ಸದರಿ ಪ್ರಕರಣಗಳನ್ನು ಗಂಭೀರ ಕೆಂಪು ಗುರುತಿನ ಪ್ರಕರಣಗಳಾಗಿ (ORMC) ಪರಿಗಣಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

| ಸಾಮಾನ್ಯ ಪ್ರಕರಣ | ಕೆಂಪು ಗುರುತಿನ ಪ್ರಕರಣ | ಗಂಭೀರ ಕೆಂಪು ಗುರುತಿನ ಪ್ರಕರಣ |
|---|---|---|
| **ಚಾಲಕರ ಮೊಬೈಲ್/ ಡಿಜಿಟಲ್ ಗ್ಯಾಜೆಟ್ಸ್ ಪ್ರಕರಣಗಳಿಗೆ ಸಂಬಂಧಿಸಿದಂತೆ** | | |
| – | – | ಚಾಲಕರು ಚಾಲನಾ ಸಮಯದಲ್ಲಿ ಕರ್ತವ್ಯದ ವೇಳೆಯಲ್ಲಿ ಮೊಬೈಲ್ ಮತ್ತು ಡಿಜಿಟಲ್ ಗ್ಯಾಜೆಟ್ಸ್ (Bluetooth, Earphone.. ಇತ್ಯಾದಿ) ಬಳಕೆ, ಮೊಬೈಲ್ ದೂರವಾಣಿ ಮೂಲಕ ಸಂಭಾಷಿಸುತ್ತಿದ್ದಲ್ಲಿ/ಸಂಗೀತ/ ಆಲಿಸುತ್ತಿದ್ದಲ್ಲಿ / ಚಾಟಿಂಗ್ (Chatting) ಮಾಡುತ್ತಿದ್ದಲ್ಲಿ. |

ತನಿಖಾ ಸಿಬ್ಬಂದಿಗಳು, ಘಟಕ ವ್ಯವಸ್ಥಾಪಕರು, ಶಿಸ್ತುಪಾಲನಾಧಿಕಾರಿಗಳು ಮತ್ತು ಸಂಬಂಧಪಟ್ಟವರೆಲ್ಲರೂ ಸಾಮಾನ್ಯ ಸ್ಥಾಯಿ ಆದೇಶದಲ್ಲಿ ಮೊಬೈಲ್ ಪ್ರಕರಣಗಳನ್ನು ಗಂಬೀರ ಕೆಂಪು ಗುರುತಿನ ಪ್ರಕರಣಗಳನ್ನಾಗಿ ವರ್ಗೀಕರಿಸಿರುವುದನ್ನು ಗಮನಕ್ಕೆ ತೆಗೆದುಕೊಂಡು ತಪ್ಪದೇ ಪಾಲಿಸುವುದು.

**ಈ ಆದೇಶವು ತಕ್ಷಣವೇ ಜಾರಿಗೆ ಬಂದಿರುತ್ತದೆ.**

8/2018

**ವ್ಯವಸ್ಥಾಪಕ ನಿರ್ದೇಶಕರು**
**ಬೆಂ.ಮ.ಸಾ.ಸಂಸ್ಥೆ, ಬೆಂಗಳೂರು**

ಪ್ರತಿಯನ್ನು:

1) ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಮಸಾಸಂಸ್ಥೆ, ರವರ ಆಪ್ತ ಸಹಾಯಕರಿಗೆ ಸದರಿ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ ರವರ ಗಮನಕ್ಕೆ ತರುವುದು.
2) ಮಾನ್ಯ ನಿರ್ದೇಶಕರು (ಮಾ&ತಂ), ಕೇಂದ್ರ ಕಛೇರಿ, ಬೆಂ.ಮ.ಸಾ.ಸಂಸ್ಥೆ, ಬೆಂಮಸಾಸಂಸ್ಥೆ, ರವರ ಆಪ್ತ ಸಹಾಯಕರಿಗೆ ಸದರಿ ವಿಷಯವನ್ನು ಮಾನ್ಯ ನಿರ್ದೇಶಕರು (ಮಾ&ತಂ), ಬೆಂಮಸಾಸಂಸ್ಥೆ ರವರ ಗಮನಕ್ಕೆ ತರುವುದು.
3) ಮಾನ್ಯ ನಿರ್ದೇಶಕರು (ಭ&ಜಾ), ಕೇಂದ್ರ ಕಛೇರಿ, ಬೆಂಮಸಾಸಂಸ್ಥೆ, ರವರ ಆಪ್ತ ಸಹಾಯಕರಿಗೆ ಸದರಿ ವಿಷಯವನ್ನು ಮಾನ್ಯ ನಿರ್ದೇಶಕರು (ಭ&ಜಾ), ಬೆಂಮಸಾಸಂಸ್ಥೆ ರವರ ಗಮನಕ್ಕೆ ತರುವುದು.
4) ಎಲ್ಲಾ ಇಲಾಖಾ ಮುಖ್ಯಸ್ಥರು, ಕೇಂದ್ರ ಕಛೇರಿ, ಬೆಂ.ಮ.ಸಾ.ಸಂಸ್ಥೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
5) ಪ್ರಾಂಶುಪಾಲರು, ವಡ್ಡರಹಳ್ಳಿ ತರಬೇತಿ ಕೇಂದ್ರ, ಬೆಂ.ಮ.ಸಾ.ಸಂಸ್ಥೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
6) ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಬೆಂ.ಮ.ಸಾ.ಸಂಸ್ಥೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
7) ಆಡಳಿತಾಧಿಕಾರಿಗಳು (ಶಿಸ್ತು), ಕೇಂದ್ರ ಕಛೇರಿ, ಬೆಂ.ಮ.ಸಾ.ಸಂಸ್ಥೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
8) ಎಲ್ಲಾ ಘಟಕ ವ್ಯವಸ್ಥಾಪಕರು/ವಿಭಾಗೀಯ ಸಂಚಾರ ಅಧಿಕಾರಿಗಳು, ಬೆಂ.ಮ.ಸಾ.ಸಂಸ್ಥೆ, ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
9) ಸಹಾಯಕ ಭದ್ರತಾ ಮತ್ತು ಜಾಗೃತಾಧಿಕಾರಿ (ತನಿಖಾ ದಳ/ಸಾರಥಿ), ಕೇಂದ್ರ ಕಛೇರಿ, ಬೆಂ.ಮ.ಸಾ.ಸಂಸ್ಥೆ, ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
10) ಸಾರ್ವಜನಿಕ ಸಂಪರ್ಕ ಅಧಿಕಾರಿ, ಬೆಂ.ಮ.ಸಾ.ಸಂಸ್ಥೆ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.